ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 17, ಸನ್ 1907.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮತ್ತೆ ಗ್ಯೆರೆಲೇರಿಂದ ಕೊಡೋಣದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 17ನೆ ಡಿಸೆಂಬರ್ 1906.

ಕೋಲಾರ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಚಿಕ್ಕ ಬಳ್ಳಾಪುರ ವಗೈರೆ ತಾಲ್ಲೂಕುಗಳಲ್ಲಿನ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಅರಗಿನ ಪೈರು ರೂಢಿಸಿಕೊಳ್ಳುವ ಹಕ್ಕು ಹರಾಜು ಆಗುವ ಬಾಬನಲ್ಲಿ 1907ನೆ ಇಸವಿ ಜನವರಿ 3ನೆ ಮಧ್ಯಂ ಮೈಸೂರು ಗೆಜಿಟ್ಟಿನ 2ನೆ ಭಾಗದ 1—2ನೆ ಪೇಜುಗಳಲ್ಲಿ ಪ್ರಾಯಿಷ್ಮಾಡಲ್ಪಟ್ಟಿರುವ ನೋಟಿಫಿಕೇರ್ಷಗೆ ಅರಗು ಸಾಗುವಳಿದಾರು ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 10ನೆ ಜನವರಿ 1907.

ತುರುವೇಕೆರೆ ಸಬ್ ತಾಲ್ಲೂಕು ಹರಿಸಿನಹಳ್ಳಿ ಜೋಡಿದಾರ್ ಬ್ಯಾಟರಾಯ ದೀಕ್ಷಿತರು ಮತ್ತು ಇತರ ಮೂರುಜನ ಜೋಡಿದಾರರ ದ ಬರಬೇಕಾದ ಸ್ಥಿಂದಾಯದ ಬಾಕಿಗಾಗಿ, ಇದರಡಿ ನಮೂದಾಗುವ ಸ್ಥಿರಸ್ವತ್ತಿನ ಹಕ್ಕು ಬಾಧ್ಯತೆಯನ್ನು ತುಮಕೂರು ಡಿಸ್ಟ್ರಿ ತುರ್ವೆಕೆರೆ ಮೊಕ್ಕಾಂನಲ್ಲಿ 1907ನೆ ಇಸವಿ ಫಿಬ್ರವರಿ 23ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಸಿದ್ಧಪಡಿಸಲ್ಪಟ್ಟಿದೆ.

ಹರಾಜು ಸದರಿ ತಾರೀಖಿನ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ಗುಬ್ಬಿ ಚಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರ ಅವರ ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಆಗಲಿ ಅಥವಾ ವೃತ್ತಿಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿ ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡಬೇಕಾದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.